ಇ) ಜಾರಿ ಮತ್ತು ತನಿಖೆ ಹಾಗೂ ವಲಯ ಸಿಬ್ಬಂದಿಯವರಿಗೆ ನಿಯಮಿತವಾಗಿ ಅಬಕಾರಿ ದಾಳಿ ಹಾಗೂ ಗಸ್ತು ನಡೆಸಿ ಅಕ್ರಮಗಳು ಜರುಗದಂತೆ ಕಟ್ಟೆಚ್ಚರವಹಿಸಲು ಸೂಚಿಸಿದೆ ಹಾಗೂ ಅಕ್ರಮಗಳು ಕಂಡಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸೂಚಿಸಿದೆ

759 (380) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಸುತ್ತಮುತ್ತ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಅಗತ್ಯವಿರುವಷ್ಟು ಭೂಮಿ ಲಭ್ಯವಿದೆಯೇ , ಹಾಗಿಲ್ಲದಿದ್ದಲ್ಲಿ, ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ , (ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರ ನೀಡುವುದು) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಅಗತ್ಯವಿರುವಷ್ಟು ಭೂಮಿ ಲಭ್ಯವಿಲ್ಲದಿರುವುದರಿಂದ ತುಮಕೂರು ಸಿರಾ ಮಧ್ಯೆ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತೆ ತುಮಕೂರು ತಾಲ್ಲೂಕು, ಕೋರ ಹೋಬಳಿ, ವಸಂತನರಸಾಪುರ, ಕೆಂಪನ ದೊಡ್ಡೇರಿ, ನಾಗೇನಹಳ್ಳಿ ಮತ್ತು ಬೆಳ್ಳಾವಿ ಹೋಬಳಿ ತಿಮ್ಮರಾಜನಹಳ್ಳಿ ಹಾಗೂ ಗಿರಿಯನ ಹಳ್ಳಿ ಗ್ರಾಮಗಳಲ್ಲಿ ಒಟ್ಟು ವಿಸ್ತೀರ್ಣ 788 ಎಕರೆ 33 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ 1966ರ ಕಲಂ 28 (4)ರನ್ವಯ ಅಂತಿಮ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

(ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

760 (885) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಪಿಂಚಣಿ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಸ್ವಾತಂತ್ರ್ಯ ಹೋರಾಟಗಾರರು ಮೃತರಾದ ಸಂದರ್ಭದಲ್ಲಿ ಶವಸಂಸ್ಕಾರ ಮಾಡಲು ಮೃತರ ಕುಟುಂಬದವರಿಗೆ ಸರ್ಕಾರದ ವತಿಯಿಂದ ನೀಡುವ ಅನುದಾನವೆಷ್ಟು ,

ಇ) ಹಾಗಿದ್ದಲ್ಲಿ, ಶವಸಂಸ್ಕಾರಕ್ಕೆ ನೀಡಿದ ಅನುದಾನ ತುಮಕೂರು ಜಿಲ್ಲಾಧಿಕಾರಿಗಳಿಂದ ಈವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು , (ಪ್ರಕರಣವಾರು ಹಣದ ವಿವರ ನೀಡುವುದು) ?